| ಓ ಎಸ್ | 96/2017 | ಪಿ.ಡಬ್ಲ್ಯೂಃ 1 |
|---|---|---|

ಇಂದು ದಿಃ 2/6/2022 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಕೆ ಎಸ್ ಕೆ ವಕೀಲರಿಂದಃ

ನಿ ಪಿ 1 ರ ಮೂಲ ದಾಖಲಾತಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಿ ಪಿ 1 ದಾಖಲೆಯನ್ನು ಈ ದಾವೆ ಸಲ್ಲಿಸುವ ಸಮಯದಲ್ಲಿ ನಾನು ಪಡೆದುಕೊಂಡಿದ್ದೆ ಎಂದರೆ ಸರಿ. ವಿಭಾಗ ಪತ್ರದಲ್ಲಿ ಉಲ್ಲೇಖಿಸಿದ ಆಸ್ತಿಗಳು ಪುಟ್ಟೇಗೌಡರ ಸ್ವಯಾರ್ಜಿತ ಆಸ್ತಿಗಳಾ ಅಥವಾ ಪಿತ್ರಾರ್ಜಿತ ಆಸ್ತಿಗಳಾ ಎಂದರೆ ಸಾಕ್ಷಿಯು ವಿಭಾಗಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ. ಪುಟ್ಟೇಗೌಡರಿಗೆ ಮಲ್ಲೇಗೌಡರು ಒಬ್ಬನೇ ಮಗನಾ ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿ ಪಿ 1 ವಿಭಾಗಪತ್ರದ ಆಧಾರದಲ್ಲಿ ನಮ್ಮ ಹೆಸರಿಗೆ ಪಹಣಿಗಳು ಬಂದಿವೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಆರೀತಿ ದಾಖಲೆ ಆಗುವಾಗ ನಾನು ಹುಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತ, ಅವರ ತಂದೆ ಹಾಗು ಅವರ ಪೂರ್ವಿಕರು ತಗಡೂರು ಗ್ರಾಮದವರೇ ಎಂದರೆ ಸಾಕ್ಷಿಯು ನನ್ನ ತಾಯಿ ಕೊಟ್ಟ ತಿಳುವಳಿಕೆ ಮೇರೆಗೆ ತಗಡೂರು ಗ್ರಾಮದವರು ಎಂದು ಗೊತ್ತಿದೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿ ಎಬಚಹಳ್ಳಿಯವರು. ನನ್ನ ಅಜ್ಜಿಗೂ ಅವರ ತಂದೆ ಕೊಟ್ಟಂತಹ ಆಸ್ತಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ, ಮುತ್ತಾತನವರಿಗೆ ಒಟ್ಟಿಗೆ 50 ರಿಂದ 60 ಎಕರೆ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ, ಮುತ್ತಾತನವರಿಗೆ ತುಂಬಾ ಆಸ್ತಿಗಳು ಇದ್ದ ಕಾರಣ ನಾಮಕಾವಸ್ತೆಗೆ ನಿ ಪಿ 1 ಮಾಡಿದ್ದಾರೆ ಹೊರತು ಕಾನೂನು ಪ್ರಕಾರ ಚಾಲ್ತಿಗೆ ಬಂದಿಲ್ಲ ಎಂದರೆ ಸರಿಯಲ್ಲ. ನಿ ಪಿ 1 ರ ಪ್ರಕಾರ 1957 ರಲ್ಲಿ ನನ್ನ ತಂದೆ ಶಿವಸ್ವಾಮಿ ಅಪ್ರಾಪ್ತವಯಸ್ಕರಾಗಿದ್ದು, ನನ್ನ ತಾತ ಮಲ್ಲೇಗೌಡರಿಗೆ ಆಸ್ತಿಯಲ್ಲಿ ಭಾಗ ಕೊಡದೆ ನೇರವಾಗಿ ಅಪ್ರಾಪ್ತ ವಯಸ್ಕರಾದ ನನ್ನ ತಂದೆಗೆ ಭಾಗ ಕೊಡಲು ಆಗುವುದಿಲ್ಲ ಎಂದರೆ ನಾನು ಒಪ್ಪುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಾತ ಮಲ್ಲೇಗೌಡ ರಿಗೆ ಒಟ್ಟು 8 ಜನ ಮಕ್ಕಳು. ಅವರ ಪೈಕಿ ನನ್ನ ತಂದೆ ಮೊದಲನೆಯವರು. ನನ್ನ ತಾತನಿಗೆ 5 ಜನ ಗಂಡು ಹಾಗೂ ಮೂವರು ಹೆಣ್ಣುಮಕ್ಕಳು. ನನ್ನ ತಾತನೇ ಅವರ

ಎಲ್ಲಾ ಮಕ್ಕಳ ಮದುವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಮಲ್ಲೇಗೌಡರು ಅವರ ಜೀವಿತ ಕಾಲಾದಲ್ಲೇ ಎಲ್ಲಾ ಗಂಡು ಮಕ್ಕಳಿಗೆ ಆಸ್ತಿ ವಿಭಾಗ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿ ಪಿ 1 ರಲ್ಲಿ ಉಲ್ಲೇಖಿಸಿದ ಆಸ್ತಿಗಳು ನನ್ನ ಚಿಕ್ಕಪ್ಪನ ಭಾಗಕ್ಕೆ ಹೋಗಿದ ಎಂದರೆ ಸಾಕ್ಷಿಯು ಚಂದ್ರಶೇಖರ್ ರವರು ಅಕ್ರಮವಾಗಿ ಬದಲಾಯಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿ ಪಿ 1 ರಲ್ಲಿ ಉಲ್ಲೇಖಿಸಿದ ಎಲ್ಲಾ ಆಸ್ತಿಗಳನ್ನೂ ನನ್ನ ಚಿಕ್ಕಪ್ಪಂದಿರು ಭೋಗ್ಯ, ಆಧಾರ, ಕ್ರಯ ಮಾಡಿದ್ದಲ್ಲದೇ ಅವುಗಳ ಮೇಲೆ ಬ್ಯಾಂಕಿನಿಂದ ಸಾಲ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿಹೋದ ನಂತರ ನಾವೆಲ್ಲರೂ ಬೆಂಗಳೂರಿಗೆ ಹೋದೆವು ಎಂದರೆ ಸಾಕ್ಷಿಯು ನಾನೊಬ್ಬಳು ಮಾತ್ರ ಅನಾಥಾಶ್ರಮದಲ್ಲಿ ಬೆಳೆದಿದ್ದು, ನನ್ನ ತಾಯಿಯ ಅಣ್ಣ ನನ್ನನ್ನು ಅನಾಥಾಶ್ರಮಕ್ಕೆ ಸೇರಿಸಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

ನನಗೆ ಒಬ್ಬ ಅಣ್ಣ ಇದ್ದರು, ಅವರು ತೀರಿ ಹೋಗಿದ್ದಾರೆ. ನನ್ನ ಅಣ್ಣನಿಗೆ 1 ನೇ ಪ್ರತಿವಾದಿಯ ಬಾಮೈದನ ಮಗಳನ್ನು ಮದುವೆ ಮಾಡಿದ್ದರು ಎಂದರೆ ಸರಿ. ಮಲ್ಲೇಗೌಡರು ಕೊಟ್ಟ ಸ್ವತ್ತುಗಳಲ್ಲಿ ಮೊದಲಿಗೆ ನನ್ನ ತಂದೆ ಹಾಗೂ ಅವರ ಮರಣಾನಂತರ ನನ್ನ ಚಿಕ್ಕಪ್ಪ 1 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಯಾವುದೇ ಹಣವನ್ನು ಕೊಡದೇ ವ್ಯವಸಾಯ ಮಾಡಿ ಅವರ ಸಂಸಾರವನ್ನು ಸಾಗಿಸುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಅಣ್ಣ ಮತ್ತು 1 ನೇ ಪ್ರತಿವಾದಿ ಅನ್ಯೋನ್ಯವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ಬಂದ ಆಸ್ತಿಗಳನ್ನು ನನ್ನ ಸುಪರ್ದಿಗೆ ಪಡೆದುಕೊಂಡಿದ್ದೇನೆ ಎಂದರೆ ಸಾಕ್ಷಿಯು ಸ ನಂ.9 ರಲ್ಲಿ 6 ಎಕರೆ 33 ಗುಂಟೆ , ಸ ನಂ.265 ರಲ್ಲಿ 5 ಗುಂಟೆ ಹಾಗೂ ಸ ನಂ.266 ರಲ್ಲಿ 39 ಗುಂಟೆ ಜಮೀನಿಗೆ ನಾನು ಜಂಟಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಚಿಕ್ಕಪ್ಪಂದಿರಾದ ಮಹದೇವಯ್ಯ, ಶಿವಮಲ್ಲಯ್ಯ ಹಾಗೂ ಕುಳ್ಳಪುಟ್ಟೇಗೌಡರಿಗೆ ತಲಾ 9 ಎಕರೆ ಆಸ್ತಿ ಇರಬಹುದು ಹಾಗೂ ಚಂದ್ರಶೇಖರ್ ರವರಿಗೆ ತಗಡೂರಿನಲ್ಲಿ 10 ಗುಂಟೆ ಆಸ್ತಿ ಇದೆ. 1 ನೇ ಪ್ರತಿವಾದಿ ನನ್ನ ತಾತನ ಕೊನೆ ಮಗ

ಎಂದರೆ ಹೌದು ಎಂದು ಸಾಕ್ಷಿ ನುಡಿಯುತ್ತಾರೆ. 1 ನೇ ಪ್ರತಿವಾದಿ ನನ್ನ ತಾತನ ಕೊನೆಯ ಮಗನಾದ ಕಾರಣ ನನ್ನ ತಾತ ಅವರ ಮಕ್ಕಳಿಗೆ ನಿ ಪಿ 1 ರಲ್ಲಿ ಉಲ್ಲೇಖಿಸಿದ ಆಸ್ತಿಗಳಲ್ಲಿ ನಿ ಪಿ 1 ರ ಪ್ರಕಾರ ಆಸ್ತಿ ಹಂಚಿಕೆ ಮಾಡದೇ ಸಮಪಾಲು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿ ಪಿ 1 ರಲ್ಲಿ ನನ್ನ ತಂದೆಯ ಭಾಗಕ್ಕೆ ಕೊಟ್ಟಂತಹ ಆಸ್ತಿಗಳನ್ನು ನನ್ನ ತಾತ 1994-95 ರಲ್ಲಿ 1 ನೇ ಪ್ರತಿವಾದಿಗೆ ಕೊಟ್ಟಿದ್ದು ನಾನು ನಿ ಪಿ 1 ರಲ್ಲಿ ನನ್ನ ತಂದೆಯನ್ನು ಅಪ್ರಾಪ್ತ ವಯಸ್ಕರು ಎಂದು ತೋರಿಸಿರುವುದನ್ನು ದುರುಪಯೋಗ ಪಡಿಸಿಕೊಂಡು 1 ನೇ ಪ್ರತಿವಾದಿಗೆ ಮೋಸ ಮಾಡಲು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಅಕ್ರಮವಾಗಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗುವಾಗ ನನ್ನ ತಂದೆ ಮತ್ತು ತಾತ ಜೀವಂತವಾಗಿದ್ದರು ಎಂದರೆ ಇದ್ದರು, ಆದರೆ ನನ್ನ ತಂದೆ ಕ್ಯಾನ್ಸರ್ ನಿಂದ ಬಳಲುತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಾತ ತೀರಿಹೋಗುವವರೆಗೂ ಅವರ ಎಲ್ಲಾ ಮಕ್ಕಳು ಒಟ್ಟುಕುಟುಂಬದಲ್ಲಿ ವಾಸವಿದ್ದರು ಎಂದರೆ ಹೌದು ಎಂದು ಸಾಕ್ಷಿ ನುಡಿಯುತ್ತಾರೆ. 1 ನೇ ಪ್ರತಿವಾದಿ ಮತ್ತು ಅವರ ಪತ್ನಿಗೆ ತೊಂದರೆ ಕೊಡಲು ನಾನು ನನ್ನ ಉಳಿದ ಚಿಕ್ಕಪ್ಪಂದಿರನ್ನು ಬಿಟ್ಟು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನಗೆ ಬಂದ ಸ್ವತ್ತುಗಳ ಆಧಾರದಲ್ಲಿ ಸಾಲ ಪಡೆದಿದ್ದಾರೆ ಎಂದರೆ ಸಾಕ್ಷಿಯು ಅವರ ಕುಟುಂಬಕ್ಕೋಸ್ಕರ ಮಾಡಿಕೊಂಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಈ ರೀತಿ ಸಾಲ ಪಡೆದಿದ್ದನ್ನು ನಾನು ಪ್ರಶ್ನಿಸಿಲ್ಲ ಎಂದರೆ ನೋಟೀಸ್ ಕೊಡುವಾಗ ತಿಳುವಳಿಕೆ ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕಾರಣ ದಾವೆ ವಜಾಗೊಳ್ಳಬೇಕು ಎಂದರೆ ನಾನು ಅದನ್ನು ಒಪ್ಪುವುದಿಲ್ಲ ಎಂದು ಸಾಕ್ಷಿನುಡಿಯುತ್ತಾರೆ. ನನ್ನ ಅಣ್ಣನ ಹೆಂಡತಿ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದ ಕಾರಣ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ.

| | | |
|---|---|---|
| ಓ ಎಸ್ | 96/2017 | ಪಿ.ಡಬ್ಲ್ಯೂ: 1 |

ಮರುವಿಚಾರಣೆಃಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.